ಮೈಸೂರು ಸ್ಟೇಟ್ ರೈಲ್ವೆ.

ಮೈಸೂರಿನಲ್ಲಿ ನಡಿಯುವ ದಸರಾ ಉತ್ಸವ.

ತಾರೀಖು 3ನೇ ಸೆಪ್ಟಂಬರ್ 1884.

ಇದರಿಂದ ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮಾಹೆ ಮಜಕೂರು 22ನೇ ಮತ್ತುಂ ಸೋಮವಾರ ಮೊದಲು 30ನೇ ಸೆಪ್ಟಂಬರ್ ಮಂಗಳವಾರದವರಿಗೆ ಉಭಯ ದಿನಗಳೂ ಶೇರಿ, ಮೈಸೂರು ಸ್ಟೇಟ್ ರೇಯಿಲ್‌ವೆಯ ಯಲ್ಲಾ ಸ್ಟೇಷ್ಷಗಳಿಂದಲೂ ಮೈಸೂರಿಗೆ ಹೋಗಿ ವಾಪಸ್ ಬರತಕ್ಕ ಬಗ್ಗೆ ಬಂದೂವರೆ ಛಾರ್ಜಿಗೆ ಮೂರನೇಕ್ಲಾಸ್ ರಿಟರ್ನ್ ಟಿಕೆಟ್‌ಗಳು ಕೊಡಲ್ಪಡುವವು; ಮತ್ತು ಅವು 1884ನೇ ಇಸವಿ ಅಕ್ಟೋಬರ್ 5ನೇ ಮತ್ತುಂ ಆದಿವಾರದವರಿಗೆ ಯಾವ ದಿನದಲ್ಲಾದರೂ ವಾಪಸ್ ಬರುವ ಬಗ್ಗೆ ಉಪಯೋಗಿಸಲ್ಪಡುವವು.

ಬೆಂಗಳೂರಿಂದಲೂ ಮತ್ತು ತುಮಕೂರಿಂದಲೂ ಮೈಸೂರಿಗೆ ಸ್ಪೆಷಲ್ ಬಂಡಿಗಳ್ ಬಿಡಲ್ಪಡುತವೆ ; ಇನ್ನೂ ಜಾಸ್ತಿ ತಪಶೀಲ್‌ಗಳು ತಿಳಿಯಬೇಕಾದರೆ ಮೈಸೂರು ಸ್ಟೇಟ್ ರೇಯಿಲ್‌ವೇ ಟ್ರಾಫಿಕ್ ಸೂಪರ್‌ಟಿಂಡೆಂಟರಿಗೆ ಬರೆದುಕೊಳ್ಳತಕ್ಕದ್ದು.

ಪ್ರಕಟನೆ.

ಬೆಂಗಳೂರು—ತುಮಕೂರು ರೈಲ್ವೆ ತೆರಿಯೋಣವು.

ಸ್ರ್ 1884ನೇ ಇಸವಿ ಆಗಸ್ಟು ತಾರೀಖು 11ನೇ ಲಾಗಾಯತು ಬೆಂಗಳೂರಿಂದ 43 ಮೈಲಿ ದೂರದಲ್ಲಿ ಇರುವ ತುಮಕೂರುವರಿಗೆ ರೈಲ್‌ವೆ ಭಂಡಿಗಳ ಮೇಲೆ ಪ್ರಯಾಣಸ್ಥರು ಅವರ ಲಗ್ಗೇಜ್, ಕುದುರೆಗಳು, ಭಂಡಿಗಳು, ನಾಯಿಗಳು, ಪಾರಸಲ್‌ಗಳು ಮತ್ತು ಗೂಡ್ಸು ಯಾನೆ ಸಾಮಾನುಗಳು ಮೈಸೂರು ರೈಲ್‌ವೆಯ ತಮಾಂ ಸ್ಟೇಷ್ಷಗಳಿಂದ ಸಾಗಿಸಲ್ಪಡುವವು.

ತುಮಕೂರು ಲೈನಲ್ಲಿ ಇರತಕ್ಕ ಸ್ಟೇಷ್ಷಗಳು ಯಾವವೆಂದರೆ:—

ಬೆಂಗಳೂರು, ಬಾಣಾವಾರ, ಗೊಲ್ಲಹಳ್ಳಿ, ದೊಡ್ಡಬಲೆ, ನಿಡವಂಡ, ಹಿರೇಹಳ್ಳಿ, ತುಮಕೂರು.

ಸ್ಟೇಷ್ಷಗಳು.		ಪ್ರಯಾಣಸ್ಥರ ಭಂಡಿ.	ಚಾರ್ಜುಗಳು.								
			1ನೇ ತರಗತಿ.			2ನೇ ತರಗತಿ.			3ನೇ ತರಗತಿ.		
		ಬೆಳ್ಳಿಗ್ಗೆ.									
ಬೆಂಗಳೂರು	ಹೊರಡುವದು ..	7–30	2	11	0	1	5	6	0	10	9
ತುಮಕೂರು	ಶೇರುವದು ..	10–37									
		ಸಾಯಿಂತ್ರ.									
ತುಮಕೂರು	ಹೊರಡುವದು ..	2–18	2	11	0	1	5	6	0	10	9
ಬೆಂಗಳೂರು	ಶೇರುವದು ..	5–25									

ವಿಶೇಷ ತಪಶೀಲುಗಳು ಪ್ರತ್ಯೇಕ ಇಸ್ತಿಹಾರಿನಲ್ಲಿ ಛಾಪಿಸಲ್ಪಟ್ಟಿರುತ್ತೆ.

ಎ. ರೀಡ್ ಬೀಚರ್,
ಮ್ಯಾನೇಜರ್.

ಬೆಂಗಳೂರು,
4ನೇ ಆಗಸ್ಟು 1884ನೇ ಇಸವಿ.